ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ಸಲ ಕೊಟ್ಟಿದ್ದಾಗಿದೆ. ಮುಂದೆ ಕೊಡುವಾಗ ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಆರ್. ರಾಮಯ್ಯ.—ಈ ಏಳು ಪರತ್ತುಗಳೂ ದೇವನಹಳ್ಳಿ ಮತ್ತು ಹೊಸಕೋಟೆ ತಾಲ್ಲೂಕಿಗಳಿಗೂ ಅನ್ವಯಿಸುತ್ತವೆಂಬುದು ಗೊತ್ತ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಗೊತ್ತಿದೆ. ದೇವನಹಳ್ಳಿ ವಿಚಾರವನ್ನು ಮುಂದೆ ಕೊಡುವಾಗ ಗಮನಿಸುತ್ತೇವೆ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಇಂದಿರಾ ನರ್ಕಾರ ರಾಷ್ಟ್ರೀಯ ವಿಸ್ತರಣೆ ಯೋಜನೆಯನ್ನು ರೆವೆನ್ಯೂ ಇಲಾಖೆಗೇ ವಹಿಸಲು ಯೋಚಿಸುತ್ತಿಲ್ಲವೆ?

ಅಧ್ಯಕ್ಷರು.—ಅದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಿಮ್ ಡಿವಿಜ್ ಆಫೀಸರ ಶಿಫಾರ್ಸಿನಮೇರೆ ಮಂಜೂರುಮಾಡುತ್ತಿರುವುದು ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಶಿಫಾರ್ಸಿನಮೇರೆ ಮಂಜೂರು ಮಾಡುವುದಿಲ್ಲ.

Sri M. C. NARASIMHAN.—Does this question refer to Bangarpet Taluk only or is it a general question ?

Mr. SPEAKER.—Since the principles are enumerated, all these questions arise out of it.

Sri G. B. SHANKAR RAO.—Are there any instructions issued by the Minister for Community Development after 4th March 1958 in the matter of allotment of N.E.S. Blocks ?

Sri H. C. LINGA REDDY.—Not that I am aware of.

Action taken on the Memorandum of Village Officers Association, Coondapur.

Q.–2530. Sri Y. MANJAYA SHETTY (Coondapur).—

Will the Government be pleased to state :—

(*a*) the scales of pay of village offi ers of different categories in the State ;

(*b*) whether the village officers association of Coondapoor in South Kanara District have submitted a Memorandum to the Chief Minister on 15th January 1957 when he visited Coondapoor, to enhance their emoluments ;

(*c*) if so, the action they have taken in the matter ?

A.—Sri KADIDAL MANJAPPA (Minister for Revenue).—

(*a*) *Vide* statement appended.

(*b*) Yes.

(*c*) The dearness allowance of village officers of South Kanara has been enhanced by Rs. 2 per month with effect from 1st April 1957.

Remuneration of Village Officers in the State.

I. BANGALORE DIVISION.

Patels.—For the first thousand rupees of the gross revenues of his village, three per cent ; for the second thousand or any part of it, two per cent ; and for the balance of gross revenue beyond two thousand rupees, one per cent. In the case of villages where the collections do not exceed Rs. 300 the patel shall in addition to the above percentages, receive a fixed annual allowance o; one rupee when the gross revenue ranges from Rs. 51 to 300, or so much of it as shall be required to make the salary upto rupees ten per annum.

Shanbhogs —For the first thousand rupees of the gross revenue of the village or villages forming a Shanbhog's charge, four per cent ; for the second thousand, three per cent ; for the third thousnd, two per cent ; for the fourth thousand one per cent and for the balance of gross revenue beyond four thousand rupees, one per cent. In addition they are also paid stationery allowance depending upon the revenue of the village.

However, in the Bellary District, the scales of remuneration paid to Patels and Shanbhogs correspond to the scales of remuneration of Patels and Shanbhogs of South Kanara District.

II. MYSORE DIVISION.

(*a*) *Patels and Shanbhogs.*—In the districts of Mysore, Mandya, Hassans Chickmagalur and Shimoga the scales of remuneration are same as in Old Mysore area, *i.e.*, Bangalore Division.

(*b*) *Coorg District.*—

Patles.—Patels are paid at the following rates :—

Patels collecting within Rs. 150 per annum at 13-3/4 per cent on collections.

		Rs.	a.	p.	
Do	from Rs. 150 to 300 at	33	12	0	each per annum.
Do	from Rs. 300 to 450 at	55	10	0	,,
Do	from Rs. 450 to 600 at	67	8	0	,,
Do	from Rs. 600 to 750 at	84	6	0	,,
	above Rs. 750..... at	101	4	0	,,

Shanbhogs.—Shanbhogs are paid in the time scale of pay per month, *viz.*' Rs. 55-3-85-4-125-5-130 (for Matriculates), Rs· 45-2-55-3-85-4-105 (for non-Matriculates). These are on par with Lower Division Clerks.

(*c*) *South Kanara District and Kollegal Taluk.*—

Patel.—Remuneration to the village officers is paid per month as follows :

	Pay	*D.A.*	*Total*
Patels	17	3	20
Shanbhogs	18	5	23

III. BELGAUM DIVISION.

Patels. For the first thusand rupees of the gross revenue of his village, 3 per cent; for the second thousand, 2 per cent and for the balance of gross revenue beyond two thousand rupees, 1 per cent. In addition they are also paid contingent allowance according to the revenue of the village.

Kulkarnis.—For the first thousand rupees of the gross revenue of his village, 5 per cent ; for the second thousand, 4 per cent ; for the third thousand, 3 per cent; for the fourth thousand, 2 per cent; and for the balance of gross revenue beyond 4 thousand rupees, 1 per cent. In addition they are also paid stationery allowance according to the revenue of the village.

Talathis.—The pay scales applicable to the Talathis as per pay scales of Bombay Government are as under :

	Rs.
Head Talathi	40-1-60
Assistant Talathi	30-1-40

In addition, D,A. at sanctioned rates as in the case of Government Servants.

IV. GULBARGA DIVISION.

Patwaries, i.e., Shanbhogs or Karnams.—The remuneration to these officials is being paid on the basis of collection of land revenue as per the scale shown below :

	Rs.
From Re. 1 to 999 as such	15
For the first thousand	75
Do second ,, ...	60
Do third ,, ...	45
Do fourth ,, ...	30

If the collection exceeds Rs. 4,000 an amount of Rs. 1·50 nP. for every 00 rupees is paid to the patwaries. The Mali and Police patels are getting 50 per cent of the scale drawn by the Patwaries.

Sri Y. MANJAYA SHETTY.—In view of the agitation carried on by the Village Officers for enhanced emoluments, will the Government consider the desirability of introducing a uniform time scale of pay for all the Village Officers in the State?

Sri KADIDAL MANJAPPA.—Sri Narasimha who was appointed to go into this question and make a report has submitted his report to the Government and the Government is examining it.

Sri G. VENKATAI GOWDA.—Why have you not made it applicable to the parts of Madras Karnataka like Kollegal?

Sri KADIDAL MANJAPPA.—I cannot assign any reason, but the Government on the representation of Village Officers of South Kanara District enhanced the dearness allowance as mentioned in the answer.

Dr. R. NAGAN GOWDA.—With regard to South Kanara, Bellary and Kollegal the salary is mentioned as Rs. 20 per month. Are these Shanbouge and Patels considered as skilled or unskilled labourers?

Sri KADIDAL MANJAPPA.—He can choose between them.

Sri GAJANANA PANDIT.—Is the Government aware that in the neighbouring State of Kerala the Patels and Shanbhogues are getting Rs. 52 per month including allowances?

Sri KADIDAL MANJAPPA.—I do not know.

ಶ್ರೀ ಮಂಜಪ್ಪ ಉಲ್ಲಾಳ್.—ಪಟೇಲ ಶ್ಯಾನುಭೋಗರ ವಿಷಯದಲ್ಲಿ ಸರ್ವಿಸ್ ರಿಜಿಸ್ಟರ್ ಮೈಂಟೈನ್ ಮಾಡುತ್ತಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಗೊತ್ತಿರುವ ಹಾಗೆ ಬಾರಾ ಬಲೂತಿ ರಿಜಿಸ್ಟರ್ ಎಂದು ಹಳೆಯ ಮೈಸೂರು ಪ್ರದೇಶದಲ್ಲಿದೆ; ತಾಲ್ಲೂಕು ಆಫೀಸಿನಲ್ಲಿ ಅವರ ಚರಿತ್ರೆ, ಇತಿಹಾಸ ಗುರುತುಮಾಡಿರುತ್ತಾರೆ. ಫರ್ವಿಸ್ ರಿಜಿಸ್ಟರ್ ಇಲ್ಲ.

Starting of Sugar Factory at Gowribidanur.

Q.—2703. Sri S. MUNI RAJU (Chickballapur).—

Will the Government be pleased to state :—

(*a*) whether any representation has been made by the sugarcane growers in Gowribidanur and Gudibanda Taluks for starting a sugar factory at Gowribidanur;

(*b*) whether there is any proposal to start a sugar factory at Gowribidanur and, if so, the stage at which this proposal is pending?

A.—Sri B. D. JATTI (Chief Minister).—

(*a*) No.

(*b*) No.

ಶ್ರೀ ಎಸ್. ಮುನಿರಾಜು.—(*a*) ಮತ್ತು (*b*) ಪ್ರಶ್ನೆಗಳಿಗೆ 'ಇಲ್ಲ.' ಎಂದು ಉತ್ತರ ಕೊಡಲಾಗಿದೆ. ಈ ಎರಡು ತಾಲ್ಲೂಕುಗಳಲ್ಲಿ ಸುಮಾರು 15 ಸಾವಿರ ಎಕರೆಗಳಲ್ಲಿ ಕಬ್ಬು ಬೆಳೆಯುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಬಿ. ಡಿ. ಜತ್ತಿ.—ಸುಮಾರು ಆರು ಸಾವಿರ ಎಕರೆಗಳಲ್ಲಿ ಬೆಳೆಯುವುದು ಗಮನಕ್ಕೆ ಬಂದಿದೆ.

ಶ್ರೀ ಎಸ್. ಮುನಿರಾಜು.—1954ರಲ್ಲಿ ಮಧ್ಯ ಪ್ರದೇಶದ ಜಯರಾಮದಾಸ್ ಎಂಬವರು ಲೈಸೆನ್ಸ್‌ಗೆ ಅರ್ಜಿಹಾಕಿ ಅಲ್ಲಿ ಅನುಕೂಲವಿದೆ. ಕೇಂದ್ರ ಸರ್ಕಾರಕ್ಕೆ ಶಿಫಾರ್ಸುಮಾಡಿ ಎಂದು ಅರ್ಜಿ ಕೊಟ್ಟಿದ್ದರೆ?

ಶ್ರೀ ಬಿ. ಡಿ. ಜತ್ತಿ.—ಮೈಸೂರು ಸರ್ಕಾರಕ್ಕೆ ಕೊಟ್ಟಿಲ್ಲ. ಆರ್. ಬಿ. ಲಕ್ಷ್ಮಣದಾಸ್ ಅಂಡ್ ಕಂಪೆನಿ ಲಕ್ನೊ—ಇವರು ಮತ್ತು ಬೆಂಗಳೂರಿನ ಸುಂದರ ಮೂರ್ತಿಯವರು ಇವರಿಬ್ಬರೂ ಲೈಸೆನ್ಸ್‌ಗೆ ಇಂಡಿಯಾ ಸರ್ಕಾರಕ್ಕೆ ಅಪ್ಲಿಕೇಷನ್ ಹಾಕಿದ್ದಾರು.

ಶ್ರೀ ಎ. ಮುನಿಯಪ್ಪ.—ಅವರಿಗೆ ವಿದ್ಯುಚ್ಛಕ್ತಿ ಮತ್ತು ಕಟ್ಟಡ ಕಟ್ಟುವುದಕ್ಕೆ ಜಮೀನು ಕೊಡಬೇಕೆಂಬ ಕಂಡಿಷನ್ ಮೇರೆ ಫ್ಯಾಕ್ಟರಿ ಓಪನ್ ಮಾಡುತ್ತೇವೆಂದು ಬರೆದುಕೊಟ್ಟಿದ್ದು ಸರಕಾರಕ್ಕೆ ಗೊತ್ತಿದೆಯೇ?

ಶ್ರೀ ಬಿ. ಡಿ. ಜತ್ತಿ.—ಅದು ಗೊತ್ತಿಲ್ಲ.

ಶ್ರೀ ಎ. ಮುನಿಯಪ್ಪ.—1954ರಲ್ಲಿ ಶ್ರೀ ಸಿದ್ದವೀರಪ್ಪನವರು ಮಂತ್ರಿಯಾಗಿದ್ದಾಗ್ಗೆ ಒಂದು ಜಾಯಿಂಟ್ ಸ್ಟಾಕ್ ಕಂಪನಿ ಮಾಡಿದರೆ ಸರ್ಕಾರದವರು ಪೂರ್ತಿ ಸಹಾಯಮಾಡುತ್ತೇವೆಂದು ಅವರು ಹೇಳಿರಲಿಲ್ಲವೆ?

ಶ್ರೀ ಬಿ. ಡಿ. ಜತ್ತಿ.—ಅದು ನನಗೆ ಗೊತ್ತಿಲ್ಲ.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಈಗ ಯಾರಾದರೂ ಫ್ಯಾಕ್ಟರಿ ರನ್ ಮಾಡುತ್ತೇವೆಂದು ಆ ತಾಲ್ಲೂಕಿನಲ್ಲಿ ಮುಂದೆ ಬಂದರೆ ನೀವು ಇಂಡಿಯಾ ಸರಕಾರಕ್ಕೆ ಬರೆದು ಲೈಸೆನ್ಸ್ ತರಿಸಿಕೊಡುವದಕ್ಕೆ support ಮಾಡುತ್ತೀರಾ?

ಶ್ರೀ ಕುಂದೂರು ರುದ್ರಪ್ಪ.—On a point of order, Sir. ಹಿಂದಿನ ಸರಕಾರ, ಈಗಿನ ಸರಕಾರ, ಮುಂದಿನ ಸರಕಾರ ಎಲ್ಲವೂ ಒಂದೇ ಆಗಿರುವುದರಿಂದ ಹಿಂದಿನ ಸರಕಾರ ಕೊಟ್ಟಿರತಕ್ಕ ಭರವಸೆಯನ್ನು ಈಗಿನ ಸರಕಾರ ದೇಶದ ಹಿತದೃಷ್ಟಿಯಿಂದ ಈಡೇರಿಸುವುದು ನ್ಯಾಯವಾಗಿರುವುದಲ್ಲವೆ?

ಅಧ್ಯಕ್ಷರು.—ಇದು ಪಾಯಿಂಟ್ ಆಫ್ ಆರ್ಡರ್ ಅಲ್ಲ. ಮಾನ್ಯ ಶ್ರೀ ವೆಂಕಟರೆಡ್ಡಿಯವರು ಇನ್ನೊಮ್ಮೆ ಪ್ರಶ್ನೆ ಕೇಳಬೇಕು.